# ರಾಜ್ಯ ಚುನಾವಣಾ ಆಯೋಗ, ಕರ್ನಾಟಕ

ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಂಡಳಿ ಕಟ್ಟಡ (ಹಿಂಭಾಗ), 1ನೇ ಮಹಡಿ, ನಂ.8, ಕನ್ನಿಂಗ್ ಹ್ಯಾಂ ರಸ್ತೆ.
ಬೆಂಗಳೂರು-52. **ಸಂಖ್ಯೆ: ರಾಚುಆ.30.ಇಯುಬಿ.2018, ದಿನಾಂಕ: 31-08-2018**

## ಪತ್ರಿಕಾ ಪ್ರಕಟಣೆ

**ವಿಷಯ: ನಗರ ಸ್ಥಳೀಯ ಸಂಸ್ಥೆಗಳ ಸಾರ್ವತ್ರಿಕ ಚುನಾವಣೆ –2018ರ ಮತದಾನದ ವಿವರ.**

**0–0–0**

ರಾಜ್ಯ ಚುನಾವಣಾ ಆಯೋಗವು ಮೈಸೂರು, ತುಮಕೂರು ಮತ್ತು ಶಿವಮೊಗ್ಗ ಮಹಾನಗರ ಪಾಲಿಕೆಗಳಿಗೆ ಹಾಗೂ ಇತರೆ ಒಟ್ಟು 105 ನಗರ ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆ ನಡೆಸಲು ಆದೇಶಿಸಿರುತ್ತದೆ. ಚುನಾವಣಾ ವೇಳಾಪಟ್ಟಿ ಘೋಷಿಸಿದ್ದಾಗ ಒಟ್ಟು ವಾರ್ಡ್‌ಗಳ ಸಂಖ್ಯೆ 2709 ಇದ್ದು, ಇಂದು **ದಿನಾಂಕ: 31.08.2018 ರಂದು** ಈ ಕೆಳಕಂಡ ಜಿಲ್ಲೆಗಳ ವಾರ್ಡ್‌ಗಳನ್ನು ಹೊರತುಪಡಿಸಿ **ಒಟ್ಟು 2633 ವಾರ್ಡ್‌ಗಳಿಗೆ ಮತದಾನ ನಡೆದಿರುತ್ತದೆ.**

- ಪ್ರಕೃತಿ ವಿಕೋಪದಿಂದ ಕೊಡಗು ಜಿಲ್ಲೆಯ 3 ಪಟ್ಟಣ ಪಂಚಾಯಿತಿಗಳ ಎಲ್ಲಾ 45 ವಾರ್ಡುಗಳ ಚುನಾವಣೆಯನ್ನು ತಡೆಹಿಡಿಯಲಾಗಿದೆ.
- ಕಲಬುರಗಿ ಜಿಲ್ಲೆಯ ಅಫಜಲ್‌ಪುರ ಪುರಸಭೆಯ ವಾರ್ಡ್ ನಂ. 19ರ ಎಲ್ಲಾ ಅಭ್ಯರ್ಥಿಗಳ ನಾಮಪತ್ರಗಳು ತಿರಸ್ಕೃತವಾದ್ದರಿಂದ ಸದರಿ ವಾರ್ಡಿಗೆ ಚುನಾವಣೆ ಇರುವುದಿಲ್ಲ.
- ಚಾಮರಾಜನಗರ ಜಿಲ್ಲೆಯ ಕೊಳ್ಳೇಗಾಲ ನಗರಸಭೆಯ ವಾರ್ಡ್ ನಂ. 9 ರಲ್ಲಿ ಸ್ಪರ್ಧಿಸಿದ್ದ ಮನ್ನಣೆ ಪಡೆದ ಬಹುಜನ ಸಮಾಜವಾದಿ ಪಾರ್ಟಿ (ಬಿ.ಎಸ್.ಪಿ.) ಅಭ್ಯರ್ಥಿ ಶ್ರೀ ಸಿ.ಎಸ್. ರಮೇಶ್ ಬಿನ್ ಲೇಟ್ ಶ್ರೀನಿವಾಸ ರವರ ನಿಧನದಿಂದಾಗಿ ಸದರಿ ವಾರ್ಡಿನ ಚುನಾವಣೆಯನ್ನು ರದ್ದುಪಡಿಸಲಾಗಿದೆ.
- ವಿವಿಧ ನಗರಸಭೆಯ 12 ವಾರ್ಡ್‌ಗಳಿಂದ ಹಾಗೂ ಪುರಸಭೆಯ 18 ವಾರ್ಡ್‌ಗಳಿಂದ ಒಟ್ಟು 30 ಅಭ್ಯರ್ಥಿಗಳು ಅವಿರೋಧವಾಗಿ ಆಯ್ಕೆಯಾಗಿರುತ್ತಾರೆ.

## ಮತದಾನದ ವಿವರ

| ಕ್ರ ಸಂ. | ಮತದಾನ ನಡೆಯುತ್ತಿರುವ ನಗರ ಸ್ಥಳೀಯ ಸಂಸ್ಥೆಗಳು | ನಗರ ಸ್ಥಳೀಯ ಸಂಸ್ಥೆಗಳು | ಚುನಾವಣೆ ಎದುರಿಸಿದ ವಾರ್ಡ್‌ಗಳು ಸಂಖ್ಯೆ | ಅವಿರೋಧವಾಗಿ ಆಯ್ಕೆಯಾದ ವಾರ್ಡ್‌ಗಳ ಸಂಖ್ಯೆ | ಮತದಾನ ನಡೆದ ವಾರ್ಡ್‌ಗಳ ಸಂಖ್ಯೆ (4-5) | ಚುನಾವಣಾ ಕಣದಲ್ಲಿರುವ ಅಭ್ಯರ್ಥಿಗಳು | ಒಟ್ಟು ಮತಗಟ್ಟೆಗಳ ಸಂಖ್ಯೆ | ಒಟ್ಟು ಶೇಕಡವಾರು ಮತದಾನ |
|---|---|---|---|---|---|---|---|---|
| **1** | **2** | **3** | **4** | **5** | **6** | **7** | **8** | **9** |
| | **ಮಹಾನಗರ ಪಾಲಿಕೆಗಳು** | | | | | | | |
| 1 | ಮೈಸೂರು | 1 | 65 | 0 | 65 | 393 | 815 | 50.52 |
| 2 | ತುಮಕೂರು | 1 | 35 | 0 | 35 | 215 | 272 | 59.34 |
| 3 | ಶಿವಮೊಗ್ಗ | 1 | 35 | 0 | 35 | 206 | 303 | 58.47 |
| | **ಇತರೆ ನಗರ ಸ್ಥಳೀಯ ಸಂಸ್ಥೆಗಳು** | | | | | | | |
| 1 | ನಗರಸಭೆಗಳು | 29 | 926 | 12 | 914 | 3383 | 2065 | 63.53 |
| 2 | ಪುರಸಭೆಗಳು | 53 | 1246 | 18 | 1228 | 3801 | 1427 | 71.90 |
| 3 | ಪಟ್ಟಣ ಪಂಚಾಯಿತಿಗಳು | 20 | 355 | 0 | 355 | 1122 | 363 | 75.47 |
| | **ಒಟ್ಟು** | **102** | **2527** | **30** | **2497** | **8306** | **3855** | **67.51** |

ಮು.ತಿ.ನೋ.

- ❖ 29 ನಗರ ಸಭೆಗಳು, 53 ಪುರಸಭೆಗಳು ಮತ್ತು 20 ಪಟ್ಟಣ ಪಂಚಾಯಿತಿಗಳಿಗೆ ನಡೆದ ಚುನಾವಣೆಯಲ್ಲಿ ಒಟ್ಟಾರೆ **ಶೇಕಡಾ 67.51 ರಷ್ಟು** ಮತದಾನವಾಗಿರುತ್ತದೆ.
- ❖ ಎಲ್ಲಾ ಮತಗಟ್ಟೆಗಳಲ್ಲಿ ಶಾಂತಿಯುತ ಮತದಾನವಾಗಿರುತ್ತದೆ.
- ❖ ಮತದಾನ ಸ್ಥಗಿತವಾಗಿರುವ ಬಗ್ಗೆ ಅಥವಾ ಮರು ಮತದಾನದ ಬಗ್ಗೆ ಪ್ರಸ್ತಾವನೆಗಳಿರುವುದಿಲ್ಲ.
- ❖ ಮತದಾನದ ಅಂಕಿ-ಅಂಶಗಳನ್ನು ರಾಜ್ಯ ಚುನಾವಣಾ ಆಯೋಗದ ವೆಬ್‌ಸೈಟ್ ***www.karsec.gov.in*** ರಲ್ಲಿ ಪ್ರಕಟಿಸಲಾಗಿದೆ.

**ಮತಗಳ ಎಣಿಕೆ: ದಿನಾಂಕ: 03.09.2018** ರಂದು ಮಹಾನಗರ ಪಾಲಿಕೆಗಳಿಗೆ ಸಂಬಂಧಿಸಿದಂತೆ ಆಯಾ ಜಿಲ್ಲಾ ಕೇಂದ್ರಗಳಲ್ಲಿ ಹಾಗೂ ಇತರೆ ನಗರ ಸ್ಥಳೀಯ ಸಂಸ್ಥೆಗಳಿಗೆ ಸಂಬಂಧಿಸಿದಂತೆ ಆಯಾ ತಾಲ್ಲೂಕು ಕೇಂದ್ರಗಳಲ್ಲಿ **ಬೆಳಿಗ್ಗೆ 8.00 ಗಂಟೆಯಿಂದ** ಮತಗಳ ಎಣಿಕೆ ನಡೆಯಲಿದೆ.

ಅರ್ಚನ ಎಂ.ಎಸ್ 31/8/2018

(ಅರ್ಚನ ಎಂ.ಎಸ್)
ಅಧೀನ ಕಾರ್ಯದರ್ಶಿ,
ರಾಜ್ಯ ಚುನಾವಣಾ ಆಯೋಗ, ಕರ್ನಾಟಕ.

**ಇವರಿಗೆ:**

1. ನಿರ್ದೇಶಕರು, ವಾರ್ತಾ ಮತ್ತು ಪ್ರಚಾರ ಇಲಾಖೆ, ಬೆಂಗಳೂರು ಇವರಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
2. ವ್ಯವಸ್ಥಾಪಕರು, ದಿನಪತ್ರಿಕೆ/ ದೂರ ದರ್ಶನ ಪ್ರಸಾರ ವಾಹಿನಿಗಳಿಗೆ ಕಳುಹಿಸಿ, ಸುದ್ದಿ ಮಾಧ್ಯಮದಲ್ಲಿ ಪ್ರಕಟಿಸುವಂತೆ ಕೋರಿದೆ.